**ಸಿ.ಸಿ. ಸಂಖ್ಯೆಃ 39 / 2012**
**ಚಾಸಾ-01 / ಪ್ರಾಸಾ-01**

**ದಿನಾಂಕಃ 24-06-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ** ಃ- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ದಿನಾಂಕಃ 09-07-2011 ರಂದು ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದ್ದು, ಅದಕ್ಕೆ ಮುಖ್ಯ ಕಾರಣ ನನಗೂ ಮತ್ತು ಆರೋಪಿತರಿಗೆ ಹಿಂದಿನ ಬೋರ್ವೆಲ್ ಕೇಸಿನ ಆರೋಪಿತರುಗಳಾದ ಹೊನ್ನಪ್ಪ, ಸಿದ್ದಲಿಂಗಯ್ಯ, ಅವರ ಮಕ್ಕಳಾದ ರಾಜಶೇಖರಯ್ಯ ಮತ್ತು ಗಂಗಾಧರಯ್ಯ, ಅವರ ಮಗಳ ಮೊಮ್ಮಗನಾದ ಈ ಪ್ರಕರಣದ ಬಿ.ಸತೀಶ್ 1 ನೇ ಆರೋಪಿ ಇವರ ಪ್ರೇರಣೆ ಹಾಗೂ ಅವರ ಸಂಬಂಧಿಕರು, ಸ್ನೇಹಿತರು ಇದಕ್ಕೆ ಮುಖ್ಯ ಕಾರಣ ಆಗಿರುತ್ತಾರೆ. ಇವರ ಪ್ರೇರಣೆಯಿಂದ ನನ್ನ ಮೇಲೆ 1 ನೇ ಆರೋಪಿಯ ಮುಂದಾಳತ್ವದಿಂದ ನನ್ನ ಮೇಲೆ ಕೊಲೆ ಪ್ರಯತ್ನ ನಡೆದಿರುತ್ತದೆ.

ದಿನಾಂಕಃ 18-12-2010 ರಂದು ಸಂಜೆ 5 ಗಂಟೆಯ ಸಮಯದಲ್ಲಿ ನಮ್ಮ ಮನೆಯ ಮುಂಭಾಗದಲ್ಲಿ ಸಾರ್ವಜನಿಕರಿಗೆ ಉಪಯೋಗ ಆಗಲೆಂದು ಬೋರ್ವೆಲ್ ಕೊರೆಯಿಸುತ್ತಿದ್ದಾಗ, ನಮ್ಮ ಮನೆಯ ಪಕ್ಕದ ಮನೆಯ ನಿವಾಸಿಗಳಾದ ಆರೋಪಿತರುಗಳು ಸಂಜೆ 7 ಗಂಟೆಗೆ ದುರುದ್ದೇಶದಿಂದ ನಮ್ಮ ಮನೆಯ ಮುಂದೆ ತೆಗೆಸುತ್ತಿದ್ದ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಬೆದರಿಕೆ ಹಾಕಿ, ಬೋರ್ವೆಲ್ ಕೊರೆಯುವುದನ್ನು ನಿಲ್ಲಿಸಿರುತ್ತಾರೆ. ಆಗ ನಾನು ಊರಿನ ಜನರನ್ನು ಕರೆದು ನ್ಯಾಯ ಪಂಚಾಯ್ತಿ ಮಾಡಲು ಪ್ರಯತ್ನಿಸಿದಾಗ ಆರೋಪಿತರುಗಳು ಸಹಕರಿಸಿರುವುದಿಲ್ಲ. ಬೋರ್ವೆಲ್ ಜಾಗವು ಅವರ ಜಾಗ ಅಲ್ಲ ಎಂದು ಗೊತ್ತಿದ್ದರೂ ಸಹ, ನನ್ನ ಮೇಲೆ ದೌರ್ಜನ್ಯ ಮಾಡಿ, ಬೋರ್ವೆಲ್ ಕೇಸಿಂಗ್ ಪೈಪಿಗೆ ಕಲ್ಲು, ಮಣ್ಣು, ಹಾಕಿದ್ದು, ನನಗೆ 30-40 ಸಾವಿರ ನಷ್ಟ ಉಂಟಾಗಿರುತ್ತದೆ. ಆ ಕೇಸಿನ ದ್ವೇಷವನ್ನು

ಇಟ್ಟುಕೊಂಡು ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ. ಈ ಮಧ್ಯೆ ರಾಜಕೀಯ ಪ್ರಭಾವ ಉಪಯೋಗಿಸಿ ದಿನಾಂಕ: 12-03-2011 ರಂದು ಮಾಗಡಿ ಪೋಲಿಸ್ ಸರ್ಕಲ್ ಇನ್ಸ್ ಪೆಕ್ಟರ್ ಶ್ರೀ. ರಾಮಚಂದ್ರ ಮೂಲಕ ನನ್ನನ್ನು ಮಾಗಡಿ ಠಾಣೆಗೆ ಕರೆಯಿಸಿ ನಮ್ಮಿಬ್ಬರನ್ನು ರಾಜೀ ಮಾಡಲು ಪ್ರಯತ್ನಿಸಿರುತ್ತಾರೆ.

ಆಗ ಅವರ ಜೊತೆಯಲ್ಲಿ ಆರೋಪಿತರುಗಳ ಬಂಧುಗಳಾದಂತಹ ವಿಪಿ ಪ್ರಕಾಶ್ ಬಿನ್ ಪುಟ್ಟಮಲ್ಲಯ್ಯ, ಈಶ್ವರಯ್ಯ ಬಿನ್ ಗಂಗಪ್ಪ, ನವರೂಳು ರವರು ಸಹ ಬಂದಿದ್ದರು, ಅಲ್ಲಿಯೂ ಮೇಲ್ಕಂಡ ಆರೋಪಿತರುಗಳು ಬೋರ್ವೆಲ್ ಸ್ಥಳ ಚಾಸಾ-1 ರವರೆಂದು ಒಪ್ಪಿಕೊಂಡಿದ್ದರು, ಆದರೆ ನಮಗಾದ ನಷ್ಟವನ್ನು ತುಂಬಲು ತಯಾರಿರುವುದಿಲ್ಲ, ಆದ್ದರಿಂದ ರಾಜೀ ಸಂಧಾನ ವಿಫಲವಾಯಿತು. ಸಿ.ಪಿ.ಐ ರವರು ಕುದೂರು ಪಿ.ಎಸ್.ಐ. ರವರಿಗೆ ಆದೇಶದ ನೀಡಿದ್ದು, ಆರೋಪಿತರುಗಳನ್ನು ಬಂಧನ ಮಾಡಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ಅಲ್ಲಿಂದ ಬಂದಂತಹ ಆರೋಪಿತರುಗಳು ಮತ್ತು ಅವರ ಹುಡುಗರು ನನ್ನ ಅಣ್ಣನಾದ ಕೆ.ಸಿ. ಶ್ರೀನಿವಾಸ್ ಮೂರ್ತಿ ರವರು ಪಾಲನಹಳ್ಳಿಯ ಶ್ರೀ. ರುದ್ರಯ್ಯನವರ ಮಕ್ಕಳಾದ ರಾಜಶೇಖರಯ್ಯನವರ ತೋಟದ ಮುಂಭಾಗದಲ್ಲಿ ಸೋಲೂರು-ಶಿವಗಂಗೆ ಮುಖ್ಯ ರಸ್ತೆಯಲ್ಲಿ ನಿಂತು ಮಾತಾನಾಡುತ್ತಿದ್ದಾಗ, ಅದೇ ದಾರಿಯಲ್ಲಿ ಬಂದ ಆರೋಪಿತರುಗಳು 1 ನೇ ಆರೋಪಿಗೆ ಪ್ರಚೋದನೆ ಕೊಟ್ಟು, ಅವರ ಮೂಲಕ ನನ್ನನ್ನು ನನ್ನ ಅಣ್ಣನ ಮುಂದೆ ಹೀನಾಮಾನವಾಗಿ ಬೈದು, ಒಂದು ವೇಳೆ ನಮ್ಮ ಮೇಲೆ ಹಾಕಿರುವಂತಹ ಪ್ರಕರಣವನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡಿದ್ದು, ಒಂದು ವೇಳೆ ಹಿಂದಕ್ಕೆ ಪಡೆಯದಿದ್ದರೆ, ಮುಂದೆ ನೆಟ್ಟಗಿರುವುದಿಲ್ಲ, ನಿಮ್ಮ ತಮ್ಮನ ಮೇಲೆ ಸೇಡನ್ನು ತೀರಿಸಿಕೊಳ್ಳುತ್ತೇನೆಂದು ಹೇಳಿದರು. ನಂತರ ಆರೋಪಿತರು ಆರು ಜನರು ಕಾರಿನ ಬಳಿ ಹೋಗಿ ಕೂತು ಮಾತನಾಡಿ, ಒಂದುವೇಳೆ ದೋಷರೋಪಣ ಪಟ್ಟಿ ಆದರೇ ನನ್ನನ್ನು ಮುಗಿಸಬೇಕೆಂದು ತೀರ್ಮಾನ ಮಾಡಿಕೊಂಡಿರುತ್ತಾರೆ. ಇದಕ್ಕೆ ಸಾಕ್ಷಿಯಾಗಿ

ರಾಜಶೇಖರಯ್ಯ, ಚಾಸಾ-3 ರವರು ಅಲ್ಲಿಯೇ ಇದ್ದರು. ಈ ವಿಚಾರವನ್ನು ರಾಜಶೇಖರಯ್ಯ ಮತ್ತು ಚಾಸಾ-3 ರವರು ನನಗೆ ದಿನಾಂಕ: 13-03-2011 ರಂದು ಬೆಳಿಗ್ಗೆ 10-10.30 ಗಂಟೆಗೆ ಕರೆ ಮಾಡಿ ತಿಳಿಸಿರುತ್ತಾರೆ. ದಿನಾಂಕ: 18-06-2011 ರಂದು ಹಿಂದೆ ಹಾಕಿದ್ದ ಬೋರ್ಮೆಲ್ ಕೇಸಿನಲ್ಲಿ ದೋಷರೋಪಣ ಪಟ್ಟಿ ಆಗಿರುತ್ತದೆ.

ದಿನಾಂಕ: 03-07-2011 ರಿಂದ ಸುಮಾರು 8-10 ದಿನಗಳ ಕಾಲ ನಮ್ಮ ಊರಿನಲ್ಲಿ ಗ್ರಾಮದೇವತೆ ಜಾತ್ರೆ ಇತ್ತು, ಈ ಬಗ್ಗೆ ತಿಳಿದ ಆರೋಪಿತರುಗಳು ಅವರ ಕ್ರಿಮಿನಲ್ ಹಿನ್ನಲೆ ಇರುವಂತಹ ಅವರ ಸ್ನೇಹಿತರು ಮತ್ತು ಬಂಧುಗಳು ನನ್ನನ್ನು ಮುಗಿಸಬೇಕು ಎಂಬ ವಿಚಾರವನ್ನು ಅವರು ನಮ್ಮ ಊರಿನ ಗ್ರಾಮ ಪಂಚಾಯ್ತಿ ಮುಂದೆ ಚರ್ಚೆ ಮಾಡುತ್ತಿದ್ದರು. ಸದರಿ ವಿಚಾರವನ್ನು ಚಾಸಾ-10 ವಿಬಿ ಮಧುಸೂದನ ಬಿನ್ ಭೀಮರಾಜು, ಉಡುಗುಂಟೆ, ಹರೀಶ ಬಿನ್ ನಾರಾಯಣಪ್ಪ ಬಾಣವಾಡಿಯಿಂದ ಇವರು ಗಳು ದಿನಾಂಕ: 05-07-2011 ರಂದು ನನಗೆ ಪೋನಿನ ಮೂಲಕ ಸುಮಾರು ಬೆಳಿಗ್ಗೆ 10.30 ರ ಸಮಯದಲ್ಲಿ ನಿಮ್ಮನ್ನು ಗ್ರಾಮ ದೇವತೆ ಜಾತ್ರೆಗೆ ಬಂದಾಗ ಮುಗಿಸಲು ಸಂಚು ಮಾಡುತ್ತಿದ್ದಾರೆಂಬುದನ್ನು ತಿಳಿಸಿರುತ್ತಾರೆ. ನನ್ನನ್ನು ಯಾಕೆ ಮುಗಿಸುತ್ತಾರೆಂದು ನಾನು ಕೇಳಿದ್ದಕ್ಕೆ ವೀರಣ್ಣ ಬಿನ್ ರುದ್ರಯ್ಯ, ಗಾಳಿಗೋಪುರಯ್ಯ ಬಿನ್ ಮಹಿಮಯ್ಯ ಮತ್ತು ಅವರ ಮಗ ಶಿವಕುಮಾರ್, ಬ್ರಮಾರಂಬ, ಪುಟ್ಟಗಂಗಯ್ಯ, ಅವರ ಸಂಬಂಧಿಕಾರಾದ ರಾಜಣ್ಣ ಮತ್ತು ನಂಜಯ್ಯ ಇವರು ಎಲ್ಲರೂ ಸಹ ನಾನು ಜಾತ್ರೆಗೆ ಹೋದರೆ ಬಿಡಬಾರದೆಂದು ಸಂಚು ಮಾಡುತ್ತಿದ್ದರು ಎಂದು ತಿಳಿಸಿದರು.

ದಿನಾಂಕ: 08-07-2011 ರಂದು ನಾನು ಸಂಜೆ ಜಾತ್ರೆಗೆ ಹೋಗಿದ್ದು, ಮಾರನೇ ದಿವಸ ದಿನಾಂಕ: 09-07-2011 ರಂದು ಸಂಜೆ 5.45 ರ ವೇಳೆಯಲ್ಲಿ 1 ನೇ ಆರೋಪಿಯ ನೇತೃತ್ವದಲ್ಲಿ ಮಾರಕಾಸ್ತ್ರಗಳ ಸಮೇತ ನನ್ನ ಮನೆಗೆ ನುಗ್ಗಿ, ನನ್ನನ್ನು ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ. ಆಗ ಮನೆಯ ತುಂಬಾ ವಿದ್ಯಾರ್ಥಿಗಳಿಗೆ ನೀಡಬೇಕಾದ

ಪುಸ್ತಕಗಳು ಮತ್ತು ಬಟ್ಟೆಗಳು ತುಂಬಿದ್ದರಿಂದ ನನ್ನನ್ನು ಹಲ್ಲೆ ಮಾಡಲು ಆಗದೇ ಇದ್ದರಿಂದ, ನನ್ನನ್ನು ಮನೆಯಿಂದ ಹೊರಗೆ ಎಳೆದು ಆರೋಪಿತರುಗಳು ಎಲ್ಲರೂ ಸೇರಿ ಮಾರಕಾಸ್ತ್ರಗಳಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಸಾಕ್ಷಿಯು ಹಾಜರು ಪಡಿಸಿರುವ ನನ್ನ ಕಾರು ಜಖಂಗೊಂಡಿರುವ ಬಿಲ್ಲನ್ನು ನಿಪಿ-3 ಎಂದು (2 ಪುಟ), ಕೆ.ಇ.ಬಿ ಜಾಗೃತದಳದಿಂದ ನೀಡಿರುವಂತಹ ಬಿಲ್ಲುಗಳನ್ನು ನಿಪಿ-4 ಎಂದು ( 7 ಪುಟ), ಡಿ.ಸಿ. ಇ.ಓ. ರವರಿಗೆ ನೀಡಿರುವಂತಹ ಮನವಿ ಪತ್ರವನ್ನು ನಿಪಿ-5 ಎಂದು, ಆರ್.ಕೆ. ದತ್ತಾ ಐಪಿಎಸ್ ರವರಿಗೆ ನೀಡಿದ ದೂರಿನ ಪ್ರತಿಯನ್ನು ನಿಪಿ-6 ಎಂದು, ಮರು ತನಿಖೆಗಾಗಿ ಗೌರ್ನರ್ ರವರಿಗೆ ನೀಡಿದ ಮನವಿ ಪತ್ರವನ್ನು ನಿಪಿ-7 ಎಂದು, ಮಹಜರ್ ದೃಢೀಕೃತ ಪ್ರತಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**